(ಇಂದು ದಿನಾಂಕ:08-01-2026 ರಂದು ಸಾಕ್ಷಿದಾರರನ್ನು ಕರೆಯಿಸಲಾಯಿತು, ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲುಃ ಎದುರುದಾರ ನಂ.3 ರವರ ಪರ ಶ್ರೀ ಎಸ್ ಎನ್ ಎಮ್ ವಕೀಲರಿಂದ.**

1. ನಿಪಿ-1 ರ ಪ್ರಕಾರ ನಾನೇ ದೂರನ್ನು ನನ್ನ ಕೈಯಿಂದ ಬರೆದುಕೊಟ್ಟಿರುತ್ತೇನೆ ಎಂದರೆ ಸರಿ. ನಿಪಿ-1 ರಲ್ಲಿ ನಾನು ಟ್ರ್ಯಾಕ್ಟರ ಚಾಲಕನ ಹೆಸರನ್ನು ನಮೂದು ಮಾಡಿಲ್ಲ ಎಂದರೆ ಸರಿ. ಮೃತ ರಾಮಣ್ಣ ನನ್ನ ಚಿಕ್ಕಪ್ಪನಾಗಬೇಕು. ಶ್ಯಾಮವ್ವ ಮತ್ತು ದುರ್ಗಮ್ಮ ನನ್ನ ಚಿಕ್ಕಮ್ಮಂದಿರು. ಅವರಿಬ್ಬರು ಮೃತ ರಾಮಣ್ಣ ಇವರ ಹೆಂಡತಿಯರು. ಶ್ಯಾಮವ್ವ ಮತ್ತು ದುರ್ಗಮ್ಮ ಇವರು ಕಂಪನಿಯ ತನಿಖಾದಾರರ ಮುಂದೆ ವಿರುಪಾಕ್ಷ ಎನ್ನುವವರು ಟ್ರ್ಯಾಕ್ಟರ ಚಲಾಯಿಸುತ್ತಿದ್ದರು ಎಂದು ಹೇಳಿದ ಬಗ್ಗೆ ನನಗೆ ಮಾಹಿತಿ ಇಲ್ಲ.
2. ವೆಂಕೋಬ ತಂದೆ ನಿಂಗಪ್ಪ ಕಾಟಾಪೂರ ಇವರು ನನಗೆ ಪರಿಚಯ ಇರುತ್ತಾರೆ. ನಾನು, ಪೋಲೀಸರು ಮತ್ತು ವೆಂಕೋಬ ನಾವೆಲ್ಲರೂ ಶಾಮಿಲಾಗಿ ವೆಂಕೋಬನ ಹೆಸರು ಸೇರಿಸಿರುತ್ತೇವೆ ಎಂದರೆ ಸರಿಯಲ್ಲ. ಮೃತ ರಾಮಣ್ಣ ಇವರ ಕುಟುಂಬಕ್ಕೆ ಅನುಕೂಲವಾಗಲೆಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ವಿಚಾರಿಸಿ ನಂತರ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ,

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು,
ಸಿಂಧನೂರು